ದ್ದೇವೆ. ಈಗ ಳಿರ್ಷಿಜಿ ಸ್ಲೀಪರ್‌ಗಳನ್ನು ಕೊಟ್ಟಿದ್ದೇವೆ. ಅವರು ಕೇಳಿದ ಪ್ರಮಾಣದಷ್ಟು ಕೊಡುವುದಕ್ಕಾಗಲಿಲ್ಲ. ಕಾರಣವೇನೆಂದರೆ, ಅರಣ್ಯ ಇಲಾಖೆಯಿಂದ ನಮಗೆ ಅವು ಬರಬೇಕಾಗಿತ್ತು; ಆದರೆ ಅವರಿಗೆ ಕೆಲವು ತೊಂದರೆಗಳಿರುವ ಕಾರಣ ಸಾಕಷ್ಟು ಪ್ರಮಾಣದ ಮರಗಳು ಸಿಕ್ಕುತ್ತಿಲ್ಲ. ಅವರು ಅರಣ್ಯವನ್ನು ಎಕ್ಸ್‌ಟ್ರಾಕ್ಷನ್ ಮಾಡುತ್ತಿದ್ದಾರೆ. ಬೇಕಾದ ಮರಗಳು ಸಿಗದಿರುವುದರಿಂದ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಆದರೂ ಆದಷ್ಟು ಬೇಗ ಸ್ಲೀಪರ್‌ಗಳನ್ನು ಒದಗಿಸಿಕೊಡಬೇಕೆಂದು ಅರಣ್ಯ ಇಲಾಖೆಯವರಿಗೆ ಒತ್ತಾಯ ಮಾಡಿದ್ದೇವೆ.

ಶ್ರೀ ಎಂ.ಸಿ. ಬಸಪ್ಪ.—ಈ ಕೆಲಸ ಬಹಳ ಮಂದಗತಿಯಿಂದ ನಡೆಯುವುದಕ್ಕೆ ಹಣದ ಕೊರತೆ ಇದೆಯೇ ಅಥವಾ ಬಾವು ಸ್ಲೀಪರ್‌ಗಳನ್ನು ಸರಬರಾಜು ಮಾಡುವುದರಲ್ಲಿ ಹಿಂದೆ ಬಿದ್ದಿದ್ದೀರಲ್ಲ, ಅದು ಕಾರಣವೇ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೆ ನಾವು ನಮ್ಮ ಹಣವನ್ನು ಖರ್ಚು ಮಾಡುವುದಿಲ್ಲ ಕೇಂದ್ರ ಸರ್ಕಾರದ ರೈಲ್ವೆ ಖಾತೆಯವರು ಮಾಡಂತ್ತಾರೆ. ಅಲ್ಲಿ ಹಣದ ಕೊರತೆ ಏನು ಇಲ್ಲ. ನಿಮ್ಮಿಂದ ಸ್ಲೀಪರ್ ಸರಬರಾಜಾಗಬೇಕಾಗಿದೆ. ಜೊತೆಗೆ ಕೆಲಸ ಕೂಡ ಮಾಡಿಲ್ಲ. ೪೦೦ ರಲ್ಲಿ ೧೦೦ ಸೇತುವೆಗಳನ್ನು ಮಾತ್ರ ಕಟ್ಟಿದ್ದಾರೆ; ಉಳಿದ ಕೆಲಸಗಳನ್ನು ಮಾಡಂತ್ತಿದ್ದಾರೆ. ಲ್ಯಾಂಡ್ ಅಕ್ವಿಜಿಷನ್ನಿಗೆ ಕೇಳಲಾಗಿದ್ದು ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಕೂಡ ಮಾಡಲಾಗಿದೆ. ಪಂಖ್ಯವಾಗಿರತಕ್ಕದ್ದು ಸ್ಲೀಪರ್ಸ್ ಕೊರತೆ. ಅದನ್ನು ಈಗ ಅರಣ್ಯ ಇಲಾಖೆಯ ವತಿಯಿಂದ ಅವರಿಗೆ ಕೊಡಿಸಬೇಕೆಂದು ಮಾಡಿದ್ದೇವೆ; ಆದರೆ ಸಾಕಷ್ಟು ಪ್ರಮಾಣದಲ್ಲಿ ಅವು ಸಿಗುತ್ತಿಲ್ಲವಾದ ಕಾರಣ ಕೆಲಸ ಸ್ವಲ್ಪ ವಿಳಂಬವಾಗಿದೆ. ಮೊದಲು ಹೇಳಿದ ರೀತಿಯಲ್ಲಿ ಸ್ಪೆಷಲ್ ಕ್ವಾಲಿಟಿ ಸ್ಲೀಪರ್ಸ್‌ನ್ನು ೨ ಸಾವಿರ ಕ್ಯೂಬಿಕ್ ಮೀಟರ್‌ನಷ್ಟು ಕೊಟ್ಟಿದ್ದೇವೆ.

Underground Drainage Projects in the State

872. SRI R.C. BALEKUNDARGI (Bailhongal).—Will the Minister for Housing and Urban Development be pleased to state.—

(a) the names of towns where the Karnataka Urban Water Supply and Sewerage Board has undertaken the underground Drainage Projects from 1978 till date;

(b) the procedure adopted to undertake the works of the Projects

(c) the number of underground Drainage Projects which are incomplete in the State;

(d) the action taken by Government to complete those Projects ;

SRI DHARAM SINGH (Minister for Housing and Urban Development).—

(a) The Karnataka Urban Water Supply and Sewerage Board has undertaken the Underground Drainage projects in the towns noted hereunder frem 1978 till date namely;

1. Bhatkal
2. Arasikere
3. Kollegal
4. Shimoga II stage and
5. Chintamani

(b) The Projects are being prepared on the request made by the concerned Town Municipalities. The proposals of these Projects would be sent to Government for its concurrence after they are duly approved by the Board. The Board would undertake the works of the Projects, which were approved by the Government after taking into consideration the financial conditions of these Town Municipalities.

(c) Fourteen underground Drainage Projects have been constructed (as on 31-12-1981) in the State.

(d) Action has been taken to complete underground Projects by taking loan from the concerned Town Municipalities and Life Insurance Corporation.

ಶ್ರೀ ಜಿ. ಕೆ. ತಕ್ಕೇಡ್.—ಕರ್ನಾಟಕ ರಾಜ್ಯದಲ್ಲಿ ಅಪೂರ್ಣವಾಗಿರತಕ್ಕ ಒಳಚರಂಡಿ ಯೋಜನೆಗಳು ೧೪ ಎಂದು ಹೇಳಿದ್ದೀರಿ. ನಮ್ಮ ಸವದತ್ತಿ ಮತ್ತು ಬೈಲಹೊಂಗಲದಲ್ಲಿ ಒಳಚರಂಡಿ ಯೋಜನೆ ಪ್ರಾರಂಭವಾಗಿ ಸುಮಾರು ೨೫ ವರ್ಷಗಳಾದರೂ ಇದುವರೆಗೆ ಪೂರ್ತಿಯಾಗಿಲ್ಲ. ಇದಕ್ಕೆ ಕಾರಣವೇನು?

ಶ್ರೀ ಧರ್ಮಸಿಂಗ್.—ರಾಜ್ಯದಲ್ಲಿ ಒಟ್ಟು ಎಷ್ಟು ಒಳಚರಂಡಿ ಯೋಜನೆಗಳು ಇವೆ ಎಂಬ ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ. ಬೈಲಹೊಂಗಲ ಮತ್ತು ಸವದತ್ತಿಯಲ್ಲಿ ಒಳಚರಂಡಿ ಯೋಜನೆ ಆಗಿಲ್ಲ ವೆಂದು ಹೇಳಂತಿದ್ದಾರೆ. ಬಹುಶಃ ಅಲ್ಲಿ ಕೆಲಸ ಆಗಿರಬೇಕು ಆಗಿಲ್ಲದಿದ್ದರೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜಿ.ಕೆ. ತಕ್ಕೇಡ್.—೨೫ ವರ್ಷಗಳಾದರೂ ಇನ್ನೂ ಅರ್ಧ ಕೆಲಸ ಮಾತ್ರ ಮಾಡಿದ್ದಾರೆ. ಅಲ್ಲಲ್ಲಿ ಜಾಗ ಬಿಟ್ಟಿದ್ದಾರೆ. ಇವತ್ತಿನವರೆಗೂ ಯಾರೂ ಅದನ್ನು ಬಂದು ನೋಡಿಲ್ಲ. ಆಗಿನ ಕಾಲದಲ್ಲಿ ಅಲ್ಲಿನ ನಗರಸಭೆಯವರು ಆ ಯೋಜನೆಯನ್ನು ಪೂರ್ತಿ ಮಾಡುವ ಸಲುವಾಗಿ ಕಟ್ಟಿದ್ದ ಹಣ ೩ ಲಕ್ಷ ರೂಪಾಯಿಗಳು. ಇವತ್ತು ಆ ಯೋಜನೆಗೆ ೩೦ ಲಕ್ಷ ರೂಪಾಯಿಗಳು ಬೇಕೆಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ಅಲ್ಲಿನ ಚರಂಡಿಗಳ ಪರಿಸ್ಥಿತಿ ಚನ್ನಾಗಿಲ್ಲದೆ ಇರುವುದರಿಂದ ಅವುಗಳಲ್ಲಿ ಜನ ಬಿದ್ದು ಸಾಯಲಿಕ್ಕೆ ಹತ್ತಿದ್ದಾರೆ. ಚರಂಡಿಗಳು ಸರಿಯಿಲ್ಲದೆ ನೀರು ಎಲ್ಲಿ ಹೋಗಬೇಕೆಂದು ಗೊತ್ತಾಗುವುದಿಲ್ಲ.

ಅಧ್ಯಕ್ಷರು.—ಪ್ರಶ್ನೆಯನ್ನು ನೋಡಿ ಕೇಳಿ. ೧೯೭೮ ರಿಂದ ಈಚೆಗೆ ಏನೇನು ಕೆಲಸವಾಗಿದೆ ಎಂಬುದನ್ನು ಹೇಳಿದ್ದಾರೆ.

ಶ್ರೀ ಜಿ.ಕೆ. ತಕ್ಕೇಡ್.—ಅಲ್ಲಿಂದ ಈಚೆಗೆ ನಾನು ಕೇಳುತ್ತಿದ್ದೇನೆ. ಇನ್ನೂ ಅಲ್ಲಿ ಕಾರ್ಯ ಮುಂದಲಿಕ್ಕೆ ಹತ್ತಿದ್ದಾರೆ. ಆ ಕಾರ್ಯಗಳು ಅರ್ಧದಲ್ಲಿ ಏಕೆ ಉಳಿದಿವೆ ಎಂದು ಕೇಳುತ್ತೇನೆ ?

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ೨೫ ವರ್ಷಗಳಿಂದ ಇನ್ನೂ ಆಗಿಲ್ಲ ಎಂದು ಹೇಳುತ್ತಿದ್ದಾರೆ, ಆ ಬಗ್ಗೆ ನಾನು ತ್ವರಿತವಾಗಿ ನೋಡುತ್ತೇನೆ ಮೆನೇಜಿಂಗ್ ಡೈರೆಕ್ಟರ್‌ರವರೂ ಸಹಾ ಇದ್ದಾರೆ. ನಾಳೆ ಇದರ ಬಗ್ಗೆ ಮಾತನಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಈ ಬಗ್ಗೆ ನನಗೂ ಕೂಡಾ ಕಾಳಜಿ ಇದೆ. ಈ ಬಗ್ಗೆ if it is correct, definitely I will take action.

ಶ್ರೀ ಎಚ್.ಎಲ್. ತಿಮ್ಮೇಗೌಡ. - ಅಧ್ಯಕ್ಷರೇ ಮಾನ್ಯ ಸಚಿವರು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಹಣಸೂರಿಗೆ ಹೋಗಿ ಒಳಚರಂಡಿ ವ್ಯವಸ್ಥೆ ಬಗ್ಗೆ ಅಡಿಗಲ್ಲು ಹಾಕಿ ಬಂದಿದ್ದಾರೆ. ಆ ಒಂದು ಯೋಜನೆ ವಿಷಯ ಈ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಕಾಣಿಸಿಲ್ಲದಿರುವುದಕ್ಕೆ ಕಾರಣವೇನು?

ಶ್ರೀ ಧರ್ಮಸಿಂಗ್.—ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಈ ಪ್ರಶ್ನೆ ೧೯೭೮ ರಿಂದೀಚೆಗೆ ಎಂದರೆ ಡಿಸೆಂಬರ್ ೮೧ ರವರೆಗೆ ಸಂಬಂಧಪಟ್ಟದ್ದು.

ಶ್ರೀ ಜಿ.ಕೆ. ತಕ್ಕೇಡ್.—ಅಧ್ಯಕ್ಷರೇ ಸವದತ್ತಿ ನಗರಸಭೆಯಲ್ಲಿ ಪ್ರಾರಂಭ ಮಾಡಿದ ಒಳಚರಂಡಿ ಯೋಜನೆಗಳನ್ನು ತಾವು ಯಾವಾಗ ಮುಗಿಸಿಕೊಡುತ್ತೀರಾ ? ಅಥವಾ ಎಷ್ಟು ಅವಧಿಯೊಳಗೆ ಮುಗಿಸಿ ಕೊಡುತ್ತೀರಾ ?

ಶ್ರೀ ಧರ್ಮಸಿಂಗ್.—೨೫ ವರ್ಷಗಳ ಹಿಂದೆ ಪ್ರಾರಂಭವಾಗಿದ್ದೆಂದು ಹೇಳುತ್ತಿದ್ದೀರಿ. ಇನ್ನು ೩–೪ ತಿಂಗಳಲ್ಲಿ ಕಂಪ್ಲೀಟ್ ಮಾಡಿಸಿಕೊಡುತ್ತೇವೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ಈ ಯೋಜನೆಯ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಪುರಸಭೆಗಳ ಹಣಕಾಸಿನ ಪರಿಸ್ಥಿತಿಯನ್ನು ವಿಮರ್ಶಿಸಿ ಕೈಗೊಳ್ಳಲಾಗುವುದೆಂದು ಎಂದಿದ್ದಾರೆ. ಹಣಕಾಸಿನ ಪರಿಸ್ಥಿತಿಯನ್ನೇ ಸಂಪೂರ್ಣವಾಗಿ ಆಧಾರವಾಗಿ ಇಟ್ಟುಕೊಂಡು ಇವುಗಳನ್ನು ಮಂಜೂರಾತಿ ಕೊಡುತ್ತೀರಾ ? ಅಥವಾ ಅಲ್ಲಿನ ಅಗತ್ಯತೆಯನ್ನು ಗಮನಿಸಿ ಮಂಜೂರಾತಿ ಕೊಡುತ್ತೀರಾ ? ಒಂದು ವಿಚಾರವನ್ನು ಹೇಳುತ್ತೇನೆ. ಈ ಒಂದು ಒಳಚರಂಡಿ ಅವಶ್ಯ ಇದ್ದರೂ ಹಣಕಾಸಿನ ತೊಂದರೆಯನ್ನು ಹೇಳಿ ಒಳಚರಂಡಿ ಮಾಡದಿದ್ದರೆ ಅಲ್ಲಿ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಆದ್ದರಿಂದ ಇವುಗಳ ಅಗತ್ಯತೆ ನೋಡಿಕೊಂಡು ಸರ್ಕಾರ ಇದನ್ನು ಮಾಡಿಸಬೇಕು. ಕೆಲವು ಕಡೆ ಪ್ರಭಾವಶಾಲಿಗಳು ಹೇಗೋ ಮಾಡಿಸಿಕೊಳ್ಳುತ್ತಾರೆ. ಈ ಬಗ್ಗೆ ಸರ್ಕಾರದ ನಿಲುವು ಏನು ? ಕೆಲವು ಕಡೆ ಎನು ಮಾಡಿದರೂ ಆಗುವುದಿಲ್ಲ. ಆದ್ದರಿಂದ ಅಗತ್ಯತೆ ನೋಡಿಕೊಂಡು ಕಾರ್ಯಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್.—ಈ ಒಳಚರಂಡಿ ವ್ಯವಸ್ಥೆಯನ್ನು ಮಂಜೂರು ಮಾಡಬೇಕಾದರೆ ನೀರು ಸರಬರಾಜನ್ನು ನೋಡಬೇಕಾಗುತ್ತದೆ. ಈ ಬಗ್ಗೆ ಎಲ್.ಐ.ಸಿ.ನವರು ಮೂರನೇ ಎರಡು ಭಾಗ ಹಣವನ್ನು ಕೊಡಬೇಕಾಗುತ್ತದೆ. ಹಾಗೂ ಸರ್ಕಾರದವರು ಮೂರನೇ ಒಂದು ಭಾಗ ಹಣವನ್ನು ಕೊಡಬೇಕಾಗುತ್ತದೆ. ಹಾಗೂ ಈ ಬಗ್ಗೆ ಪುರಸಭೆಯವರು ಒಪ್ಪಿಗೆಯನ್ನು ಕೊಡಬೇಕಾಗುತ್ತದೆಂದು ಹೇಳುತ್ತೇನೆ. ಅವರೂ ಕೂಡ ಒಪ್ಪಬೇಕು. ಪುರಸಭೆಯವರು ಈ ಬಗ್ಗೆ ರೆಸಲ್ಯೂಷನ್ ಮಾಡಬೇಕು. ಅವರು ಪಣ ಪೂರೈಸದೇ ಯೋಜನೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇಂಟರ್‌ನ್ಯಾಷನಲ್ ವಾಟರ್ ಡೀಕೇಡ್ ಎಂದು ಹೇಳಿ ೨೭ಕೋಟಿ ಯೋಜನೆಯಲ್ಲಿ ಎಲ್ಲಾ ಕಡೆ ಒಳಚರಂಡಿ ವ್ಯವಸ್ಥೆ ಮಾಡಬೇಕೆಂದು ನಾವು ಪ್ಲಾನ್ ಪ್ರಿಪೇರ್ ಮಾಡಿದ್ದೇವೆ. ಈ ಒಂದು ಕಾರ್ಯವನ್ನು ಎಲ್ಲಾ ನಗರಗಳಲ್ಲಿ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿದ್ದೇವೆ.

Sanction of High Schools for the year 1981-82

95. SRI S. S. ARAKERI (Balloli).—Will the Minister of State for Primary and Secondary Education be pleased to state.—

(a) total number of applications received for sanction of High Schools for the year 1981-82;

(b) number of applicatiens from Scheduled Caste and Scheduled Tribe managements;

(c) number of High Schools given to Scheduled Caste and Scheduled Tribe institutions and non-Scheduled Caste and Scheduled Tribe institutions;

(d) number of Government High Schools sanctioned for the year 1981-82;

(e) names of the Private Managements to whom High Schools have been sanctioned?